# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/1263/2021
ಪಿಓ/ಎ.ಆರ್.ಇ-2 (ಮಂಡಳಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ: 19/11/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ ಮತ್ತು ತುಮಕೂರು, ಜಿಲ್ಲಾ ಅಂತರ್ಜಲ ಕಛೇರಿ, ಅಂತರ್ಜಲ ನಿರ್ದೇಶನಾಲಯ, ಭೂವಿಜ್ಞಾನಿ, ಹಿರಿಯ ಭೂವಿಜ್ಞಾನಿ ಪ್ರಭಾರ, ಶ್ರೀ ಟಿ. ವೆಂಕಟೇಶ್, ಬಿನ್ ಲೇಟ್ ಟಿ. ತಿಮ್ಮಯ್ಯ, ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ತುಮಕೂರು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ ಟಿ. ವೆಂಕಟೇಶ್, ಬಿನ್ ಲೇಟ್ ಟಿ. ತಿಮ್ಮಯ್ಯ, ಭೂವಿಜ್ಞಾನಿ, ಹಿರಿಯ ಭೂವಿಜ್ಞಾನಿ ಪ್ರಭಾರ, ಜಿಲ್ಲಾ ಅಂತರ್ಜಲ ಕಛೇರಿ, ಅಂತರ್ಜಲ ನಿರ್ದೇಶನಾಲಯ, ತುಮಕೂರು, ತುಮಕೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು ಶ್ರೀ. **ಸಿದ್ದಪ್ಪ ಬಿನ್ ಈರಣ್ಣ, ಗೌಡಿ ಹಳ್ಳಿ ಗೊಲ್ಲರಹಟ್ಟಿ ಗಾಮ, ಬೆಳ್ಳಾವಿ ಹೋಬಳಿ, ತುಮಕೂರು ತಾ. ಮತ್ತು ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು, ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ತುಮಕೂರು ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ:01/2019 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ತುಮಕೂರು ತಾ. ಗೌಡಿಹಳ್ಳಿ ಗೊಲ್ಲರಹಟ್ಟಿ ಗ್ರಾಮದ ಸರ್ವೆ ನಂ.160ರ ಜಮೀನಿನ ಮಾಲೀಕರಿದ್ದು, ಸದರಿ ಜಮೀನಿನಲ್ಲಿ ಒಂದು ಬೋರ್‌ವೆಲ್ ಕೊರೆಸಿದ್ದು, ಅದರಲ್ಲಿ ನೀರು ಕಡಿಮೆ ಆಗಿದ್ದು ಮತ್ತೊಂದು ಬೋರ್‌ವೆಲ್ ಕೊರೆಸಲು ಪಾಯಿಂಟ್ ಮಾಡಿಸಲು ಹಾಗೂ ಹಳೇ

ಬೋರ್‌ವೆಲ್ ನೊಂದಣಿ ಮಾಡಿಸಲು ಹಿರಿಯ ಭೂವಿಜ್ಞಾನಿ ಪ್ರಭಾರ, ಹಿರಿಯ ಭೂವಿಜ್ಞಾನಿ ಜಿಲ್ಲಾ ಅಂರ್ತಜಲ ಕಛೇರಿ, ಅಂರ್ತಜಲ ನಿರ್ದೇಶನಾಲಯ, ತುಮಕೂರು, ಆದ ಎದುರುದಾರರನ್ನು ಭೇಟಿ ಮಾಡಿ ವಿಚಾರ ಮಾಡಲಾಗಿ, ಎದುರುದಾರರಾದ ನೀವು ದೂರುದಾರರಿಗೆ ನೊಂದಣಿ 1500-/ ರೂ, ಪಾಯಿಂಟ್ ಮಾಡುವುದಕ್ಕೆ 3,000/- ರೂ. ಲಂಚದ ಹಣವನ್ನು ತಂದು ಶ್ರೀ ಹರ್ಷಧರರವರ ಕೈಗೆ ಕೊಡುವಂತೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಸಂಬಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

ii. ದಿ:21/01/2019ರಂದು ಬೆಳಿಗ್ಗೆ 11-15ಗಂಟೆಗೆ ದೂರುದಾರರಿಗೆ ಲಂಚ ಕೊಡಲು ಇಷ್ಟವಿಲ್ಲದ್ದರಿಂದ, ದೂರುದಾರರು ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ತುಮಕೂರು ಎಸಿಬಿ ಪೋಲಿಸ್ ಠಾಣೆ ಮೊ. ಸಂ.01/2019 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ಅದೇ ದಿನ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ವಿಜಯಕುಮಾರ್ ಡಿ. (ನೆರಳು ಸಾಕ್ಷಿ) 2) ಶ್ರೀ. ಮಲ್ಲಿಕಾರ್ಜುನ್ ಎಸ್. ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನ ಮೆಮೊರಿ ಕಾರ್ಡನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್‌ಗೆ ಹಾಕಿ ನಂತರ ಲ್ಯಾಪ್ ಟಾಪ್‌ನಿಂದ ಒಂದು ಡಿವಿಡಿಗೆ ಸಂಭಾಷಣೆಯನ್ನು ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.500/- ಮುಖಬೆಲೆಯ 8-ನೋಟುಗಳು, ರೂ. 100/- ಮುಖಬೆಲೆಯ 5-ನೋಟುಗಳು), ಒಟ್ಟು 4,500/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಪಂಚರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ ಮಲ್ಲಿಕಾರ್ಜುನ್‌ರವರ ಮೂಲಕ ದೂರುದಾರರ ಅಂಗಿಯ ಮೇಲ್ಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಮಲ್ಲಿಕಾರ್ಜುನ್‌ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್

ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಮಲ್ಲಿಕಾರ್ಜುನ್‌ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಿ, ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ನಿಮ್ಮ ಕೈಗಳಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ದೂರುದಾರರಿಗೆ ತನಿಖಾಧಿಕಾರಿಗಳು ನೀಡಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂದಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ.21.01.2019ರಂದು ಮಧ್ಯಾಹ್ನ 01–45ರಿಂದ 03–15 ಗಂಟೆಯವರೆಗೆ ತುಮಕೂರು ಎಸಿಬಿ ಕಚೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ. ನಂತರ ಅದೇ ದಿನ ದಾಳಿ ತಂಡದವರು ತುಮಕೂರು ಸಿದ್ದಗಂಗಾ ಬಡಾವಣೆಯಲ್ಲಿರುವ ಹಿರಿಯ ವಿಜ್ಞಾನಿ, ಅಂತರ್ಜಲ ಕಛೇರಿಯ ಬಳಿ ಹೋಗಿದ್ದು, ದೂರುದಾರ ಮತ್ತು ನೆರಳು ಸಾಕ್ಷಿ ಎದುರುದಾರರನ್ನು ಕಚೇರಿಯಲ್ಲಿ ವಿಚಾರಿಸಿದಾಗ, ಅವರು ಕಾರ್ಯಕ್ರಮಕ್ಕೆ ಹೋಗಿದ್ದು, ಈ ದಿನ ಬರುವುದಿಲ್ಲ ಅಂತಾ ತಿಳಿಸಿದ್ದರಿಂದ, ವಾಪಸ್ಸು ಎಸಿಬಿ ಕಚೇರಿಗೆ ಬಂದಿರುತ್ತಾರೆ.

iv. ದಿ.23/01/2019ರಂದು ಪುನ: ಎಸಿಬಿ ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಅನುಸರಿಸ ಬೇಕಾದ ಕ್ರಮಗಳನ್ನು ಅನುಸರಿಸಿ, ಮಧ್ಯಾಹ್ನ 01:40 ಗಂಟೆಗೆ ದೂರುದಾರರು ಹಾಗೂ ನೆರಳು ಸಾಕ್ಷಿಯೊಂದಿಗೆ ಎದುರುದಾರರ ಕಚೇರಿಗೆ ಬಂದು ಅವರನ್ನು ಕೊಠಡಿಯಲ್ಲಿ ಭೇಟಿ ಮಾಡಿ, ತನ್ನ ಬೋರ್‌ವೆಲ್ ನೋಂದಣಿ ಮತ್ತು ಹೊಸದಾಗಿ ಬೋರ್‌ವೆಲ್ ಕೊರೆಸುವ ಬಗ್ಗೆ ಕೊಟ್ಟಿರುವ ಅರ್ಜಿಯ ಕುರಿತು ವಿಚಾರಿಸಿದಾಗ, ಎದುರುದಾರರು ಅರ್ಜಿಯನ್ನು ಪರಿಶೀಲಿಸಿ ಅರ್ಜಿಯ ಮೇಲೆ ಬರೆದು ಸಹಿ ಮಾಡಿ, ನಂತರ ಅರ್ಜಿಯನ್ನು ಅಲ್ಲೆ ಇಟ್ಟುಕೊಂಡು ಹಣವನ್ನು ಹರ್ಷದ್‌ರವರ ಕೈಲಿ ಕೊಡು ಎಂದು ಹೇಳಿದ್ದು, ಆಗ ಹರ್ಷದ್‌ರವರು ರೆಕಾರ್ಡ್ ರೂಂಗೆ ಹೋಗಿದ್ದು, ದೂರುದಾರರು ಲಂಚದ ಹಣವನ್ನು ಎದುರುದಾರರು ತಿಳಿಸಿದಂತೆ

ಹರ್ಷದ್‌ರವರಿಗೆ ಕೊಟ್ಟಿರುತ್ತಾರೆ. ಹರ್ಷದ್‌ರವರು ಎದುರುದಾರರ ಹೇಳಿಕೆಯಂತೆ ಹಣವನ್ನು ಸ್ವೀಕರಿಸಿ ತಮ್ಮ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ.

V. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಎದುರುದಾರರ ಕಛೇರಿಯ ಒಳಗೆ ಬಂದಿದ್ದು, ಆಗ ದೂರುದಾರರು ತನಿಖಾಧಿಕಾರಿಗಳಿಗೆ ಹರ್ಷದ್‌ರವರನ್ನು ತೋರಿಸಿ ತಾನು ಇವರಿಗೆ ಎದುರುದಾರರು ನೀವು ತಿಳಿಸಿದಂತೆ ಲಂಚದ ಹಣ ಕೊಟ್ಟಿರುವುದಾಗಿ ಹಾಗೂ ಎದುರುದಾರರನ್ನು ತೋರಿಸಿ ದೂರುದಾರರು ಎದುರುದಾರರ ಹೇಳಿಕೆಯಂತೆ ಹರ್ಷದ್‌ರವರಿಗೆ ಹಣ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಮತ್ತು ಎದುರುದಾರರ ಪರವಾಗಿ ಲಂಚದ ಹಣ ಸ್ವೀಕರಿಸಿದ ಹರ್ಷದ್‌ರವರಿಗೆ ತಮ್ಮ ಗುರುತಿನ ಚೀಟಿ ತೋರಿಸಿ ತಮ್ಮ ಪರಿಚಯ ಹೇಳಿ ಮತ್ತು ನಿಮ್ಮ ಪರಿಚಯ ಕೇಳಿ, ನಿಮ್ಮ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ಎರಡು ಪ್ರತ್ಯೇಕ ಬಟ್ಟಲುಗಳಲ್ಲಿ ಹರ್ಷದ್ ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಹರ್ಷದ್‌ರವರಿಗೆ ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರು ಪಡಿಸುವಂತೆ ಸೂಚಿಸಿದಾಗ, ಹರ್ಷದ್‌ರವರು ತಾನು ಧರಿಸಿದ್ದ ಪ್ಯಾಂಟಿನ ಬಲಭಾಗದ ಜೇಬಿನಿಂದ ಹಣವನ್ನು ಹೊರತೆಗೆದು ಹಾಜರು ಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆ ಮೇರೆಗೆ ಪಂಚಸಾಕ್ಷಿಯವರಿಗೆ ನೋಟುಗಳನ್ನು ಪರಿಶೀಲಿಸುವಂತೆ ಹೇಳಿದ್ದು, ಅವುಗಳನ್ನು ಪರಿಶೀಲಿಸಿದಾಗ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹೋಲಿಕೆಯಾಗಿರುತ್ತವೆ. ಎದುರುದಾರರು ಈ ಬಗ್ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಹರ್ಷದ್ ರವರಿಗೆ ಬದಲೀ ವ್ಯವಸ್ಥೆ ಮಾಡಿ ಅವರು ಧರಿಸಿದ್ದ ಪ್ಯಾಂಟಿನ ಬಲಭಾಗದ ಜೇಬನ್ನು ಹೊರಮಾಡಿ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಹಾಗೂ ಸದರಿ ಪ್ಯಾಂಟನ್ನು ಮತ್ತು ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅಲ್ಲಿ ನಡೆದ ವಿದ್ಯಾಮಾನಗಳ ಬಗ್ಗೆ

ತನಿಖಾಧಿಕಾರಿಗಳು ದೂರುದಾರರನ್ನು ಮತ್ತು ನೆರಳುಸಾಕ್ಷಿಯನ್ನು ಕೇಳಿ ತಿಳಿದುಕೊಂಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿದ್ದು, ಅದನ್ನು ಹಾಜರುಪಡಿಸಲು ಹೇಳಿದಾಗ ದೂರುದಾರರು ಎದುರುದಾರರನ್ನು ಬೇಟಿಮಾಡಲು ಹೋಗುವಾಗ ಗಾಬರಿಯಲ್ಲಿ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಲು ಮರೆತಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ತನಿಖಾಧಿಕಾರಿಗಳು ಸದರಿ ವಾಯ್ಸ್ ರೆಕಾರ್ಡ್‌ನಿಂದ ಯಾವುದೇ ಸಿಡಿಯನ್ನು ಮಾಡಿಕೊಂಡಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಡಿವಿಡಿಗಳನ್ನು ತಯಾರಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ಎದುರುದಾರರು ". . . . . ಶ್ರೀಮತಿ ನಾಗವೇಣಿಯವರಿಗೆ ವೈಜ್ಞಾನಿಕ ಅಧ್ಯಯನ ನಡೆಸಿ ತಾಂತ್ರಿಕ ವರದಿಯನ್ನು ಸಿದ್ದಪಡಿಸಿ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು ಆದರೂ ಸಹ ಸದರಿಯವರು ಕೆಲಸದಲ್ಲಿ ಉದಾಸೀನ ತೋರುತ್ತಿದ್ದು ಯಾವುದೇ ವರದಿಗಳನ್ನು ಈ ಕಚೇರಿಗೆ ನೀಡಿರುವುದಿಲ್ಲ, ಈ ಕಾರಣದಿಂದ ನಾನು ಸಾಕಷ್ಟು ಬಾರಿ ಮೌಖಿಕವಾಗಿ ಹಾಗೂ ಜ್ಞಾಪನಪತ್ರಗಳನ್ನು ನೀಡಿದ್ದರೂ ಸಹ ಕರ್ತವ್ಯ ಲೋಪ ಎಸಗುತ್ತಿದ್ದು ಕಂಡುಬಂದಿರುವ ಹಿನ್ನೆಲೆಯಲ್ಲಿ ಖಾಸಗಿ ಭೂವಿಜ್ಞಾನಿಯವರಿಂದ ಶ್ರೀ. ಹರ್ಷಧರ ರವರಿಗೆ ತಾಂತ್ರಿಕ ವರದಿ ಸಲ್ಲಿಸಲು ಸದರಿಯವರಿಗೆ ಸೂಚಿಸಲಾಗಿತು ಅದರಂತೆ ಅರ್ಜಿದಾರರಿಂದ ನಾನು ಯಾವುದೇ ಲಂಚದ ಹಣವನ್ನು ಕೆಲಸ ಕಾರ್ಯ ಇಲ್ಲದಿರುವುದರಿಂದ ಇವರಿಗೆ ವರದಿ ತಯಾರಿಸಿ ಕೊಡಲು ಕೋರಲಾಗಿತ್ತು. ಅದರಂತೆ ಅವರು ಶುಲ್ಕವನ್ನು ಸಂಗ್ರಹಿಸಿ ಖಾಸಗಿ ನುರಿತ ವ್ಯಕ್ತಿಗಳಿಗೆ ನೀಡಿ ವರದಿಯನ್ನು ಸಲ್ಲಿಸಲಾಗುತ್ತಿತ್ತು ಹಾಗೂ ರೈತರಿಂದ ರೂ.1,000/- ವನ್ನು ವರದಿ ಶುಲ್ಕವಾಗಿ ಶ್ರೀ. ಹರ್ಷಧರ ರವರಿಂದ ನುರಿತ ವ್ಯಕ್ತಿಗಳಿಗೆ ವರದಿ ತಯಾರಿಸಿ ಸಲ್ಲಿಸಲು ಸೂಚಿಸಲಾಗಿತ್ತು. ಸದರಿಯವರು

ದಿನಾಂಕ:28/09/2018ರಿಂದ ಅರ್ಜಿ ಬಂದ ನಂತರ ಅದರ ದಾಖಲಾತಿಗಳನ್ನು ಖಾಸಗಿ ಭೂವಿಜ್ಞಾನಿಯವರಿಗೆ ನೀಡಲು ಕಚೇರಿಗೆ ಆಗಾಗ್ಗೆ ಬರುತ್ತಿದ್ದರು. ಶ್ರೀ. ಸಿದ್ದಪ್ಪನವರು ದೂರು ನೀಡಿರುವ ಅಂಶದಂತೆ ನಾನು ರೂ.4500/– ಗಳನ್ನು ಶ್ರೀ. ಹರ್ಷಧರ ರವರಿಗೆ ನೀಡಲು ಸೂಚನೆ ನೀಡಿರುವುದಿಲ್ಲ. ಹಾಗಾಗಿ ಈ ದೂರು ಸ್ವಯಂವೇದವಾಗಿದ್ದು, ಈ ಪ್ರಕರಣವನ್ನು ಕೈಬಿಡಲು ತಮ್ಮಲ್ಲಿ ಕೋರಲಾಗಿದೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ಹಾಗೂ ನೆರಳುಸಾಕ್ಷಿಯವರನ್ನು ವಿಚಾರಿಸಿದಾಗ, ಎದುರುದಾರರು ನೀಡಿರುವ ಲಿಖಿತ ವಿವರಣೆ ತಪ್ಪಾಗಿರುವುದಾಗಿ ಹಾಗೂ ಈ ದಿನ ಲಂಚದ ಹಣವನ್ನು ಕೇಳಿ ಪಕ್ಕದಲ್ಲಿರುವ ಹರ್ಷಧರ ರವರಿಗೆ ಕೊಡು ಎಂದು ಹೇಳಿಕೆ ನೀಡಿ ತಮ್ಮ ಮೊದಲ ಹೇಳಿಕೆಗಳಿಗನುಸಾರವಾಗಿ ನುಡಿದಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸುವಂತೆ ಎದುರುದಾರರಿಗೆ ತಿಳಿಸಿದಾಗ, ಎದುರುದಾರರು ಅವರ ಬಳಿ ಇದ್ದ ಕಡತವನ್ನು ಹಾಜರುಪಡಿಸಿದ್ದು, ಆ ಕಡತದ ಪ್ರತಿಗಳನ್ನು ಎದುರುದಾರರ ಮೇಲಾಧಿಕಾರಿಗಳಾದ ಶ್ರೀ. ಜಯಣ್ಣ ಜಿ. ಉಪ–ನಿರ್ದೇಶಕರು (ಪ್ರಭಾರ), ಅಂತರ್ಜಲ ನಿರ್ದೇಶನಾಲಯ, ಖನಿಜಭವನ, ನಂ.49, ಬೆಂಗಳೂರು, ರವರು ಸದರಿ ಕಚೇರಿಗೆ ಹಾಜರಾಗಿದ್ದು, ಅವರಿಂದ ಧೃಡೀಕರಿಸಿಕೊಂಡು ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಸದರಿಯವರ ಸಮಕ್ಷಮದಲ್ಲಿ, ದೂರುದಾರರು ಟ್ರ್ಯಾಪ್ ಪೂರ್ವದಲ್ಲಿ ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಡಿವಿಡಿಗಳಿಗೆ ವರ್ಗಾಯಿಸಿದ್ದು, ಅವುಗಳನ್ನು ಒಂದೊಂದಾಗಿ ಲ್ಯಾಪ್‌ಟಾಪ್ ಸಹಾಯದಿಂದ ಪ್ಲೇ ಮಾಡಿ ಕೇಳಿಸಲಾಗಿ, ಅವುಗಳಲ್ಲಿನ ಒಂದು ಧ್ವನಿಯು ಎದುರುದಾರರದ್ದು ಅಂತ ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿದ ಬಗ್ಗೆ ಅವರ ಮೇಲಾಧಿಕಾರಿಗಳಾದ ಶ್ರೀ. ಜಯಣ್ಣ ಜಿ. ಉಪ–ನಿರ್ದೇಶಕರು (ಪ್ರಭಾರ), ಅಂತರ್ಜಲ ನಿರ್ದೇಶನಾಲಯ, ಖನಿಜಭವನ, ನಂ.49, ಬೆಂಗಳೂರು, ರವರಿಗೆ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂದಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ.23/01/2019ರಂದು ಮಧ್ಯಾಹ್ನ 01–40 ಗಂಟೆಯಿಂದ ಸಂಜೆ 06–30 ಗಂಟೆಯವರೆಗೆ ಜಿಲ್ಲಾ ಅಂತರ್ಜಲ ಕಛೇರಿ, ಅಂತರ್ಜಲ ನಿರ್ದೇಶನಾಲಯ,

ತುಮಕೂರು, ಕಚೇರಿಯಲ್ಲಿ ಟ್ರಾಪ್ ಮಹಜರ್‌ನ್ನು ಲ್ಯಾಪ್‌ಟಾಪ್‌ನಲ್ಲಿ ತನಿಖಾಧಿಕಾರಿಗಳ ಉಕ್ತಲೇಖನದಂತೆ ಟೈಪ್ ಮಾಡಿಸಿರುತ್ತಾರೆ.

ix. ಆಗ ಸದರಿ ಹರ್ಷದ್‌ರವರಿಂದ ದೊರೆತ ಹಣವನ್ನು ಜಪ್ತ ಮಾಡಿಕೊಂಡು ಪಂಚರ ಸಮಕ್ಷಮ ತನಿಖಾಧಿಕಾರಿಗಳು ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಹಾಗೂ ಅವರ ಪರ ಹಣ ಸ್ವೀಕರಿಸಿದ ಹರ್ಷದ್‌ರವರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

x. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮೊಬೈಲ್ ಧ್ವನಿ ಮುದ್ರಣವು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಹರ್ಷದ್‌ರವರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

xi. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 01/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರು ಸುಳ್ಳು ದೂರನ್ನು ಕೊಟ್ಟು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು, ತನಿಖಾಧಿಕಾರಿಗಳು ಕೊಟ್ಟಿ ಸಾಕ್ಷಾದಾರಗಳನ್ನು ಸೃಷ್ಠಿಸಿ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ. ತಾನು ಎಂದೂ ದೂರುದಾರರಿಗೆ ಹಣದ ಬೇಡಿಕೆ ಇಟ್ಟಿರುವುದಿಲ್ಲ, ಪ್ರಾಯೋಗಿಕ ಪಂಚನಾಮೆಯಲ್ಲಿ ತಿಳಿಸಿದ ಸಂಗತಿಗಳು ಸುಳ್ಳಾಗಿರುತ್ತವೆ ಮತ್ತು

ತನ್ನ ಮೇಲೆ ಪಡೆದಿರುವ ಅಭಿಯೋಜನಾ ಮಂಜೂರಾತಿ ಆದೇಶವು ಕಾನೂನು ರೀತಿ ಇರುವುದಿಲ್ಲ ಅಂತಾ ತಿಳಿಸಿರುತ್ತಾರೆ. ಅದೂ ಅಲ್ಲದೆ ತನ್ನ ಮೇಲೆ ಈಗಾಗಲೇ ಮಾನ್ಯ 7ನೇ ಆಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು, ರಲ್ಲಿ ತನ್ನ ಮೇಲೆ ಇದೇ ಘಟನೆ ಕುರಿತಂತೆ ವಿಚಾರಣೆ ಪ್ರಾರಂಭವಾಗಿದ್ದು, ಅದರಲ್ಲಿ ಈಗಾಗಲೇ ದೂರುದಾರರನ್ನು ಮತ್ತು ನೆರಳು ಸಾಕ್ಷಿಯವರನ್ನು ಸಾಕ್ಷಿ-1 ಮತ್ತು 2 ಅಂತ ವಿಚಾರಣೆಗೆ ಒಳಪಡಿಸಿದ್ದು, ಅವರುಗಳ ಹೇಳಿಕೆಗಳಲ್ಲಿ ವ್ಯತ್ಯಾಸದ ಹೇಳಿಕೆ ಇದ್ದು, ಅಂತಹ ವ್ಯತ್ಯಾಸದ ಹೇಳಿಕೆ ಇದ್ದ ಸಂದರ್ಭದಲ್ಲಿ ಅದರ ಲಾಭವನ್ನು ಆರೋಪಿಗೆ ನೀಡಬೇಕೆಂದಿರುವ ಒಂದು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಹಾ ಉಲ್ಲೇಖಿಸಿದ್ದು, ಆದರೆ ಸದರಿ ಸಾಕ್ಷಿದಾರರುಗಳ ಹೇಳಿಕೆಗಳನ್ನು ಮತ್ತು ತೀರ್ಪನ್ನು ಈ ಹಂತದಲ್ಲಿ ಪರಿಗಣಿಸುವುದು ಸೂಕ್ತವಿರುವುದಿಲ್ಲ ಹಾಗೂ ಸದರಿ ಪ್ರಕರಣಕ್ಕೆ ಈ ತೀರ್ಪು ಅನ್ವಯಿಸುವುದಿಲ್ಲ. ದೂರುದಾರರ ಕೆಲಸವನ್ನು ನಿಯಮಾನುಸಾರ ಮಾಡಲು ತಡವಾಗುತ್ತದೆ ಅಂತ ತಿಳಿಸಿದ್ದರಿಂದ, ಆ ಸಿಟ್ಟಿನಿಂದ ತನ್ನ ಮೇಲೆ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಮತ್ತು ತಾನು ಯಾವುದೇ ಹಣದ ಬೇಡಿಕೆ ಇಟ್ಟು ಮಾತನಾಡಿರುವುದಿಲ್ಲ. ಹಾಗೂ ತಾನು ತನ್ನ ಕರ್ತವ್ಯದಲ್ಲಿ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿದ್ದು, ತಾನು ಯಾವುದೇ ದುರ್ನಡತೆಯನ್ನು ಎಸಗಿರುವುದಿಲ್ಲ ಕಾರಣ ತನ್ನ ಮೇಲಿನ ಇಲಾಖಾ ವಿಚಾರಣೆ ಒಳಪಡಿಸಲು ಮಾಡುತ್ತಿರುವ ನಡವಳಿಕೆಗಳನ್ನು ಕೈಬಿಡಬೇಕೆಂದು ಕೋರಿಕೊಂಡಿರುತ್ತಾರೆ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಹರ್ಷದ್‌ರವರ ಮೂಲಕ ಪಡೆದುಕೊಂಡಿದ್ದು, ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ

ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

**6)** ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

19/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.